ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 29-1-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಸಮಾರೋಪ ಸಮಾರಂಭ:<br><br>ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ಕಾರ್ಯಕ್ರಮ :<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಅಧ್ಯಕ್ಷತೆ:<br><br>ಶ್ರೀ ಎನ್.ಆರ್. ವಿಶುಕುಮಾರ್,<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಮುಖ್ಯ ಅತಿಥಿಗಳು:<br><br>ಕೋಟಿಗಾನಹಳ್ಳಿ ರಾಮಯ್ಯ,<br>ಹಿರಿಯ ಪತ್ರಕರ್ತರು, ಸಾಹಿತಿಗಳು ಹಾಗೂ ದಲಿತಪರ ಹೋರಾಟಗಾರರು<br><br>ಶ್ರೀ ದಿನೇಶ್ ಅಮೀನ್ ಮಟ್ಟು,<br>ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು,<br><br>ಡಾ: ಆರ್. ಪೂರ್ಣಿಮಾ,<br>ಹಿರಿಯ ಪತ್ರಕರ್ತರು | 30-1-2015<br>ಶುಕ್ರವಾರ<br>ಸಂಜೆ<br>4-00 ಗಂಟೆಗೆ | ಸುಲೋಚನಾ ಚಿತ್ರಮಂದಿರ<br>ಮೊದಲನೇ ಮಹಡಿ,<br>ವಾರ್ತಾ ಸೌಧ,<br>ಭಗವಾನ್ ಮಹಾವೀರ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿ

**ಬೆಂಗಳೂರು, ಜ. 29 (ಕನಾ□ಟಕ ವಾತೆ□) :**

2013 ನೇ ಸಾಲಿನ ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿಯನ್ನು ಡಾ: ಎಂ.ಎಂ. ಕಲ್ಬುರ್ಗಿ, ಧಾರವಾಡ ಇವರಿಗೆ ನೀಡಲು ಸರ್ಕಾರಿ ಆದೇಶ ಹೊರಡಿಸಿದೆ.
ಬಾಬು/ಕೆಎಂ

# ಸಾರಿಗೆ ಅದಾಲತ್

**ಬೆಂಗಳೂರು, ಜ. 29 (ಕನಾ□ಟಕ ವಾತೆ□) :**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಕೆ.ಆರ್. ಪುರಂ, ಮೇಡಹಳ್ಳಿ ಬಳಿ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು-49 ಇಲ್ಲಿ ಜನವರಿ 30 ರಂದು ಮಧ್ಯಾಹ್ನ 3.00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ. ಈ ಕಚೇರಿಯ ವ್ಯಾಪ್ತಿಯ ಸಾರ್ವಜನಿಕರು ಸಾರಿಗೆ ಅದಾಲತ್‌ನಲ್ಲಿ ಭಾಗವಹಿಸಿ ಇಲಾಖೆಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳಲು ಸೂಚಿಸಿದೆ.
ಬಾಬು/ಕೆಎಂ

# ಸುದ್ದಿ ಬರವಣಿಗೆಗೆ ಪೂರ್ವ ತಯಾರಿ ಅಗತ್ಯ

**ಬೆಂಗಳೂರು, ಜ. 29 (ಕನಾ□ಟಕ ವಾತೆ□) :**

ಪತ್ರಕರ್ತರು ಎಲ್ಲಾ ಭಾಷೆಗಳನ್ನು ಕಲಿತಿರಬೇಕು, ಇಂಗ್ಲಿಷ್ ಭಾಷೆಯನ್ನು ಕಲಿಯುವುದರ ಜೊತೆಗೆ ಕನ್ನಡ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಬೇಕು ಎಂದು ಹಿರಿಯ ಪತ್ರಕರ್ತರಾದ ಖಾದ್ರಿ ಅಚ್ಯುತನ್ ತಿಳಿಸಿದರು.

ಅವರು ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಿದ್ದ ವೃತ್ತಿ ಮತ್ತು ನಿರೂಪಣಾ ಕೌಶಲ್ಯ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಬಾನುಲಿ ಪತ್ರಿಕೋದ್ಯಮದ ಕುರಿತು ಮಾತನಾಡುತ್ತಿದ್ದರು.

ಸುದ್ದಿ ವರದಿ ಮಾಡುವಾಗ ವಸ್ತುನಿಷ್ಠವಾಗಿ ವರದಿ ಮಾಡಬೇಕು, ಇಲ್ಲದಿದ್ದಲ್ಲಿ ಸುದ್ದಿ ಮೌಲ್ಯ ಕಳೆದುಕೊಳ್ಳುತ್ತದೆ. ವರದಿಯು ನಿಷ್ಪಕ್ಷಪಾತವಾಗಿರಬೇಕು. ಸುದ್ದಿ ಬರೆಯುವಾಗ ಯಾವ ಪರ ಮತ್ತು ವಿರೋಧವಾಗಿ ಬರೆಯಬಾರದು ಎಂದು ಸಲಹೆ ನೀಡಿದರು.

ರೇಡಿಯೋ ಮತ್ತು ಟಿವಿಯಲ್ಲಿ ಸುದ್ದಿ ಓದುವ ಮೊದಲು ಅದಕ್ಕೆ ಪೂರಕವಾದ ತಯಾರಿ ಅತ್ಯಗತ್ಯ ಹಾಗೂ ಅಂದಿನ ವಿದ್ಯುನ್ಮಾನಗಳ ಬಗ್ಗೆ ಹೆಚ್ಚು ಮಾಹಿತಿಯನ್ನು ತಿಳಿದಿರಬೇಕು ಎಂದು ಹೇಳಿದರು.

ಭಾಷೆಗಳನ್ನು ಕಲಿಯುವುದರ ಜೊತೆಗೆ ಕಥೆಗಳನ್ನು ಹೇಳುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು ಇದರಿಂದ ಸೃಜನಶೀಲವಾದ ಕಲೆಯು ಬೆಳೆಯುತ್ತದೆ ಎಂದು ಸಲಹೆ ನೀಡಿದರು.

ಮಾಧ್ಯಮಗಳಲ್ಲಿ ಸುದ್ದಿ ಮಾಡುವಾಗ ಸಮೂಹ ಕಾರ್ಯ ಮುಖ್ಯವಾಗಿದ್ದು, ಪರಸ್ಪರ ಸಹಕಾರದಿಂದ ಮಾತ್ರ ಯಾವ್ಯದೇ ಸುದ್ದಿ ಚೆನ್ನಾಗಿ ಮೂಡಿಬರಲು ಸಾಧ್ಯ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರತಿ ದಿನ ನಿಘಂಟನ್ನು ಓದುವುದರಿಂದ ಪದ ಸಂಪತ್ತು ಬೆಳೆಯುತ್ತದೆ ಮತ್ತು ದಿನಕ್ಕೆ 5 ಹೊಸ ಪದಗಳನ್ನು ಕಲಿಯುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಈಟಿವಿ ವಾಹಿನಿಯ ಸುದ್ದಿ ಮುಖ್ಯಸ್ಥರಾದ ಜಿ.ಎನ್.ಮೋಹನ್ ಅವರು ಟಿ.ವಿ. ಪತ್ರಕರ್ತನ ಜವಾಬ್ದಾರಿ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.
ಎನ್‌ಎಸ್/ಕೆಎಂ